## 6ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ

## ಬೆಂಗಳೂರು

ಸಿಸಿ ನಂಃ 8572-2015

ಫಿರ್ಯಾದಿದಾರರು : ಮೈಕೋ ಲೇಔಟ್ ಪೊಲೀಸರು

- ವಿರುದ್ಧ –

ಆರೋಪಿತರು 1.ಚೇತನ್ ಮತ್ತು ಇತರರು

- - -

### ದಂ ಪ್ರ ಸಂ ಕಲಂ 313 ರಡಿ ಆರೋಪಿಯ ಹೇಳಿಕೆ

ಪ್ರ-1 ಅಭಿಯೋಜನೆ ಪಕ್ಷದವರ ಸಾಕ್ಷಿಗಳ ಸಾಕ್ಷ್ಯ ಕೇಳಿದ್ದೀರಾ?

ಉಃ

ಪ್ರ.2 ಪ್ರಾಸಾ-1 ಶಾಲಿನಿ ರವರು ತಮ್ಮ ಸಾಕ್ಷ್ಯದಲ್ಲಿ 2003 ರಿಂದ 2005 ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕಾಲೇಜಿನಲ್ಲಿ 1ನೇ ಆರೋಪಿಯವರು ನನ್ನ ಸಹಪಾಠಿಯಾಗಿರುತ್ತಾರೆ. ಆಗಿನಿಂದ 1ನೇ ಆರೋಪಿಯವರು ನನ್ನನ್ನು ಹಿಂಬಾಲಿಸುತ್ತಾ, ಅವರನ್ನು ಮದುವೆಯಾಗಬೇಕೆಂದು ನನಗೆ ಒತ್ತಾಯ ಮಾಡಿ ಹೆದರಿಸುತ್ತಾ ಬಂದಿರುತ್ತಾರೆ. 1ನೇ ಆರೋಪಿಯವರ ತಂದೆ ತಾಯಿ, ಸಹೋದರಿಯರು, 1ನೇ ಆರೋಪಿಯವರಿಗೆ ಕುಮ್ಮಕ್ಕು ನೀಡಿ, ನನ್ನ ವಿರುದ್ಧ ಅವರ ದುರ್ನಡತೆಯನ್ನು ಬೆಂಬಲಿಸುತ್ತಾ ಬಂದಿರುತ್ತಾರೆ. ನಂತರ ನಾನು 1ನೇ ಆರೋಪಿಯವರು ನನ್ನ ಜೊತೆ ಮದುವೆಯಾಗುವ ಪ್ರಸ್ತಾಪವನ್ನು ನಿರಾಕರಿಸಿರುತ್ತೇನೆ. ಈ ಎಲ್ಲಾ ಘಟನೆಗಳು 2003 ರಿಂದ 2014 ರ ವರೆಗೆ ನಡೆದಿರುತ್ತವೆ. ನಾನು 1ನೇ ಆರೋಪಿಯವರ ಜೊತೆಗೆ ಮದುವೆಯಾಗುವುದಿಲ್ಲವೆಂದು ಅವರ ಕುಟುಂಬದ ಸದಸ್ಯರಾದ ಉಳಿದ ಆರೋಪಿತರಿಗೆ ತಿಳಿಸಿದಾಗ, ಉಳಿದ ಆರೋಪಿತರು 1ನೇ ಆರೋಪಿಯವರನ್ನೇ ಬೆಂಬಲಿಸಿ, ನನಗೆ ಅವಾಚ್ಯ ಶಬ್ದಗಳಿಂದ ನಿಂದಿಸಿರುತ್ತಾರೆ ಮತ್ತು 1ನೇ ಆರೋಪಿಯವರು ನನಗೋಸ್ಕರ ಅವರ ದೇಹಕ್ಕೆ ಹಾನಿ ಉಂಟು ಮಾಡಿಕೊಳ್ಳುತ್ತಿದ್ದಾರೆಂದು ನನಗೆ ದೂರಿರುತ್ತಾರೆ. 2011 ನೇ ಸಾಲಿನಲ್ಲಿ 1ನೇ ಆರೋಪಿಯವರ ತಂದೆಯಾದ 2ನೇ ಆರೋಪಿಯವರು ನಾನು 1ನೇ ಆರೋಪಿಯವರ ಜೊತೆಗೆ ಮದುವೆ ಆಗುವುದಿಲ್ಲವೆಂದು ಅವರ ಮದುವೆಯ ಪ್ರಸ್ತಾಪವನ್ನು ನಿರಾಕರಿಸಿದಕ್ಕಾಗಿ 2ನೇ ಆರೋಪಿಯವರ ಅಳಿಯನು ರಾಜಕೀಯ ಹಿನ್ನಲೆಯನ್ನು ಹೊಂದಿದ್ದು, ಅದನ್ನು

ದುರುಪಯೋಗಪಡಿಸಿಕೊಂಡು 2 ನೇ ಆರೋಪಿಯವರು ನನಗೆ ನಾನು ಎಷ್ಟು ಜನರಿಗೆ ಇಲ್ಲಿಯವರೆಗೆ ಯಾಮಾರಿಸಿರುತ್ತೇನೆಂದು, ನಾನು ಯಾರಿಗೆ ಹುಟ್ಟಿರುತ್ತೇನೆಂದು, ನಾನು ಯಾವ ಜಾತಿಯವಳು ಇರುತ್ತೇನೆಂದು, ಅವಾಚ್ಯವಾಗಿ ನಿಂದಿಸಿ, ನನ್ನ ಮನೆಗೆ ಪೋಲಿಸರನ್ನು ಕರೆದುಕೊಂಡು ಬರುತ್ತೇನೆಂದು ನನಗೆ ಹೆದರಿಸಿರುತ್ತಾರೆ. 1 ನೇ ಆರೋಪಿಯವರ ಇಬ್ಬರು ಸಹೋದರಿಯರು ಕೂಡ 1 ನೇ ಆರೋಪಿಯವರ ದುರ್ವತನೆಯನ್ನು ಸರಿಪಡಿಸಿಕೊಳ್ಳುವಂತೆ ಅವರಿಗೆ ಬುದ್ಧಿಮಾತು ಹೇಳದೆ, ಅದಕ್ಕೆ ವಿರುದ್ಧವಾಗಿ 1 ನೇ ಆರೋಪಿಯವರಿಗೆ ನನ್ನ ವಿರುದ್ಧ ಕುಮ್ಮಕ್ಕು ನೀಡಿ ನನಗೆ 1 ನೇ ಆರೋಪಿಯವರ ಜೊತೆಗೆ ಮಾತನಾಡಬೇಕು, 1 ನೇ ಆರೋಪಿಯವರ ಮೊಬೈಲ್ ಕರೆಗಳನ್ನು ಸ್ವಿಕರಿಸಬೇಕು ಮತ್ತು 1 ನೇ ಆರೋಪಿಯವರನ್ನು ನಾನು ಮದುವೆಯಾಗಬೇಕೆಂದು ನನಗೆ ಒತ್ತಾಯಿಸುತ್ತಿದ್ದರು. 1 ನೇ ಆರೋಪಿಯವರ ಮದುವೆಯ ಪ್ರಸ್ತಾಪವನ್ನು ನಾನು ನಿರಾಕರಿಸಿದ್ದಕ್ಕಾಗಿ, 3 ನೇ ಆರೋಪಿಯವರು ನನ್ನ ಮನೆಯಲ್ಲಿ 1 ನೇ ಆರೋಪಿಯವರ ಜೊತೆ ಸೇರಿ ನನಗೆ, ನನ್ನ ತಂದೆ ತಾಯಿಯವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಒಂದು ವೇಳೆ 1 ನೇ ಆರೋಪಿಯವರು ಆತ್ಮಹತ್ಯೆ ಮಾಡಿಕೊಂಡರೆ ಅವರ ಮೃತ ದೇಹವನ್ನು ಅವರು ನನ್ನ ಮನೆಯ ಬಾಗಿಲಿಗೆ ತೆಗೆದುಕೊಂಡು ಬರುತ್ತೇನೆಂದು ಹೇಳಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರ.3 ಪ್ರಾಸಾ-1 ಶಾಲಿನಿ ರವರ ಮುಂದುವರೆದ ಸಾಕ್ಷ್ಯದಲ್ಲಿ 5 ನೇ ಆರೋಪಿ ಕಾಲೇಜಿನಲ್ಲಿ ಅವರ ಹಿರಿಯ ವಿದ್ಯಾರ್ಥಿನಿ ಯಾಗಿದ್ದು 1 ನೇ ಆರೋಪಿಯು ಕಳುಹಿಸಿದ ಮೋಬೈಲ್ ಸಂದೇಶಗಳನ್ನು ಅವರಿಗೆ ರವಾನಿಸುತ್ತಿದ್ದರು. 4 ಮತ್ತು 5 ನೇ ಆರೋಪಿಯು ಅವರಿಗೆ ಕರೆ ಮಾಡಿ 1 ನೇ ಆರೋಪಿಯವರ ಕರೆಯನ್ನು ಅವರಿಗೆ ಸಂಪರ್ಕಿಸಿ 1 ನೇ ಆರೋಪಿಯವರ ಜೊತೆಗೆ ಮಾತನಾಡಲು ಅವರಿಗೆ ಹಿಂಬಾಲಿಸಲು 1 ನೇ ಆರೋಪಿಗೆ ಸಹಾಯ ಮಾಡುತ್ತಿದ್ದರು. ಅವರು 1 ನೇ ಆರೋಪಿಯವರಲ್ಲಿ ಯಾವುದೇ ಆಸಕ್ತಿ ಹೊಂದಿರುವುದಿಲ್ಲವೆಂದು 5 ನೇ ಆರೋಪಿಯವರಿಗೆ 2004 ಮತ್ತು 2010 ರಲ್ಲಿ ತಿಳಿಸಿರುತ್ತಾರೆ. 4 ನೇ ಆರೋಪಿಯು ಸಹ ಅವರಿಗೆ ಪೋನ್ ಕರೆಗಳನ್ನು ಮಾಡಿ 1 ನೇ ಆರೋಪಿಯ ಪೋನ್ ಕರೆಗಳನ್ನು ಅವರು ಸ್ವೀಕರಿಸಬೇಕೆಂದು ಅವರಿಗೆ ಹೇಳುತ್ತಿದ್ದರು. 2006 ರಿಂದ 2012 ರವರೆಗೆ 1 ನೇ ಆರೋಪಿಯವರು ಅವರಿಗೆ ತೊಂದರೆ ಕೊಡುತ್ತಿದ್ದ ಬಗ್ಗೆ ಅವರು 4 ನೇ ಆರೋಪಿಯವರಿಗೆ ತಿಳಿಸಿರುತ್ತಾರೆ. ಆದ್ಯಾಗ್ಯೂ ಕೂಡ 4 ನೇ ಆರೋಪಿಯವರು ಆ ವಿಚಾರವನ್ನು ಅವರ ಮನೆಯಲ್ಲಿ ಅವರ ತಂದೆ ತಾಯಿಯವರಿಗೆ ತಿಳಿಸದೇ ತುಂಬಾ ಲಘುವಾಗಿ ತೆಗೆದುಕೊಂಡಿರುತ್ತಾರೆ. 1 ನೇ ಆರೋಪಿಯವರ ತಾಯಿಯು ಅವರ ತಾಯಿಗೆ

ಅವರು 1 ನೇ ಆರೋಪಿಯವರ ಜೊತೆ ಮಾತನಾಡಲು ಹೇಳುವಂತೆ ಅವರಿಗೆ ಒತ್ತಾಯಿಸುತ್ತಿದ್ದರು. 1 ನೇ ಆರೋಪಿಯವರ ಜೊತೆ ಮಾತನಾಡಲು ಹೇಳುವಂತೆ ಅವರಿಗೆ ಒತ್ತಾಯಿಸುತ್ತಿದ್ದರು. 1 ನೇ ಆರೋಪಿಯವರ ತಾಯಿಯು ನನ್ನನ್ನು ಮತ್ತು ನನ್ನ ತಾಯಿಯನ್ನು 1 ನೇ ಆರೋಪಿಯವರ ಜೊತೆ ಅವರು ಮದುವೆ ಮಾಡಿಕೊಳ್ಳಬೇಕೆಂದು ತುಂಬಾ ಒತ್ತಾಯಿಸುತ್ತಿದ್ದರು. ಆದರೆ ಅವರು ಅವರ ಮದುವೆಯ ಪ್ರೊಪೋಸಲ್ ನ್ನು ಗೌರವದಿಂದ ತಿರಸ್ಕರಿಸಿರುತ್ತಾರೆ. ಅವರ ತಾಯಿಯವರು 1 ನೇ ಆರೋಪಿಯವರ ತಾಯಿಯವರಿಗೆ ಅವರಿಗೆ 1 ನೇ ಆರೋಪಿಯವರ ಜೊತೆ ಮದುವೆಯಾಗುವಂತೆ ಒತ್ತಾಯಿಸಬೇಡಿ ಎಂದು ಹಲವು ಬಾರಿ ಕೇಳಿಕೊಂಡಿರುತ್ತಾರೆ. ಆದ್ಯಾಗೂ ಕೂಡ 1 ನೇ ಆರೋಪಿಯವರು ಅವರಿಗೆ ತೊಂದರೆ ಕೊಡುವುದನ್ನು ಅವರು ಬಿಟ್ಟಿರುವುದಿಲ್ಲ. 1 ನೇ ಆರೋಪಿಯವ ತಾಯಿಯು ಎಲ್ಲಾ ಸಂಗತಿಗಳಿಗೆ ಅವರೇ ಕಾರಣ ಎಂದು ಅವರಿಗೆ ದೋಷಿಸುತ್ತಿದ್ದರು. 1 ನೇ ಆರೋಪಿಯವರ ತಾಯಿಯಿ ಮದುವೆಯು ಪ್ರೊಪೋಸಲ್ ಅನ್ನು ಅವರು ತಿರಸ್ಕರಿಸಿದ್ದಕ್ಕಾಗಿ ಅವರ ಅಹಂಕಾರಕ್ಕೆ ಧಕ್ಕೆಯಾಗಿದೆ ಎಂದು ತಿಳಿದು ಅವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದಿರುತ್ತಾರೆ. 1 ನೇ ಆರೋಪಿಯವರು ಅವರ ಕಾರಣದಿಂದ ಆತ್ಮಹೆತ್ಯೆಗೆ ಪ್ರಯತ್ನ ಮಾಡಿರುತ್ತಾರೆಂದು ಅವರಿಗೆ ದೂಷಿಸಿರುತ್ತಾರೆ. 1 ನೇ ಆರೋಪಿಯವರಿಗೆ ಆಗುತ್ತಿರುವ ಎಲ್ಲಾ ತೊಂದರೆಗೆ ಅವರೇ ಕಾರಣವೆಂದು ಮತ್ತು ಅವರು ಹಣ ಇದ್ದವರ ಹಿಂದೆ ಹೋಗುತ್ತೇವೆಂದು ಹಾಗೂ ಹೆಣ್ಣು ನಾಯಿ ಚೆನ್ನಾಗಿದ್ದರೆ ಗಂಡು ಚೆನ್ನಾಗಿರುತ್ತಾರೆ, ನೀನೆ ಚೆನ್ನಾಗಿರುವುದಿಲ್ಲವೆಂದು ಅವರಿಗೆ ಬೈದಿರುತ್ತಾರೆಂದು, 1 ನೇ ಆರೋಪಿಯವರ ಜೀವಕ್ಕೆ ತೊಂದರೆ ಆದರೆ 1 ನೇ ಆರೋಪಿಯವರ ಹೆಣವನ್ನು ತಂದು ಅವರು ಅವರ ಬಾಗಿಲಿಗೆ ಹಾಕುತ್ತೇನೆಂದು ಹೇಳಿರುತ್ತಾರೆ ಮತ್ತು ಕೆರ ತೆಗೆದುಕೊಂಡು ಅವರಿಗೆ ಹೊಡೆಯುತ್ತೇನೆಂದು ಹೇಳಿರುತ್ತಾರೆ. ತದ ನಂತರ 3 ನೇ ಆರೋಪಿಯು ಕುಮ್ಮಕ್ಕಿನ ಮೇರೆಗೆ 1 ನೇ ಆರೋಪಿಯವರು ಅವರ ಮೇಲೆ ಹಲ್ಲೆ ಮಾಡಿರುತ್ತಾರೆ. ಆ ಕಾರಣಕಾಕಗಿ ಅವರ ಮೊಣಕಾಲಿನ ಮೇಲೆ ಆ ಬಗ್ಗೆ ಗಾಯದ ಗುರುತು ಇರುತ್ತದೆಂದು, 3 ನೇ ಆರೋಪಿಯವರು ಅವರಿಗೆ ಹಲವಾರು ಬಾರಿ ಕರೆ ಮಾಡಿ ಅವರ ತಂದೆಯವರ ಜೊತೆಗೆ ಅವರಿಗೆ ಮಾತನಾಡಲು ಅನವು ಮಾಡಿಕೊಡಬೇಕಂ಼ೆಂದು ಅವರಿಗೆ ಒತ್ತಾಯಿಸಿರುತ್ತಾರೆ. 1 ಮತ್ತು 3 ನೇ ಆರೋಪಿಯವರು ಅವರ ಮನೆಗೆ ಬಂದು ಮತ್ತೆ 3 ನೇ ಆರೋಪಿಯವರು 1 ನೇ ಆರೋಪಿಯವರ ಜೊತೆಗೆ ಮದುವೆಯಾಗು ಎಂದು ಅವರಿಗೆ ಒತ್ತಾಯಿಸಿದ್ದು ಅದಕ್ಕೆ ಅವರು ತಿರಸ್ಕಸಿದ್ದಾಕಾಗಿ 3 ನೇ ಆರೋಪಿಯವರು 1 ನೇ ಆರೋಪಿಯವರ ಸಮಕ್ಷಮ ಅವರ ಮೇಲೆ ಹಲ್ಲೆ ಮಾಡಿರುತ್ತಾರೆ. ನಂತರ ಮನೆಯಿಂದ ಹೊರಗೆ ಹೋಗುವಾಗ ರಸ್ತೆಯಲ್ಲಿ ನಿಂತು ಅವರಿಗೆ ಕಚಡ ಮುಂಡೆಯರು, ಸೂಳೆ ಮುಂಡೆಯವರು ಎಂದು ಬೈದಿರುತ್ತಾರೆ. ನಂತರ 2 ನೇ ಆರೋಪಿಯವರ ಹಿರಿಯ ಅಣ್ಣನವರ ಮನೆಗೆ ಅವರು ಅವರ ತಾಯಿ ಮತ್ತು ಸಂಬಂದಿಕರು

ಹೋಗಿ ಆರೋಪಿತರ ದುರ್ವತನೆ ಬಗ್ಗೆ ತಿಳಿಸಿ ಆರೋಪಿತರಿಗೆ ತಿಳಿ ಹೇಳಬೇಕೆಂದು ಕೇಳಿದ್ದಕ್ಕೆ ಅವರು ಆರೋಪಿತರಿಗೆ ಬುದ್ದಿ ಹೇಳುತ್ತೇವೆಂದು ಹೇಳಿರುತ್ತಾರೆ. ತದ ನಂತರವೂ ಕೂಡ 3 ನೇ ಆರೋಪಿ ಅವರ ಕಸಿನ್ ರವರು ಮತ್ತು ಒಬ್ಬ ವ್ಯಕ್ತಿ ಅವರ ಮನೆಯ ಒಳಗೆ ಅತಿಕ್ರಮ ಪ್ರವೇಶ ಮಾಡಿ ಅವರಿಗೆ ಬೈದಿರುತ್ತಾರೆ ಮತ್ತು ಹೆದರಿಸಿರುತ್ತಾರೆ. ನಂತರ ಆರೋಪಿತರು ಮತ್ತು ಅವರ ಸಂಬಂದಿಕರು ಕೂಡ ಅವರಿಗೆ ತೊಂದರೆ ಕೊಡಲು ಪ್ರಾರಂಬಿರುತ್ತಾರೆ. ತದನಂತರ ಹಲವಾರು ಬಾರಿ ಹಲವಾರು ಘಟನೆಗಳು ನಡೆದಿದ್ದು, 1 ನೇ ಆರೋಪಿಯವರಿಗೆ ಉಳಿದ ಆರೋಪಿತರು ಬೆಂಬಲಿಸುತ್ತಾ ಬಂದಿರುತ್ತಾರೆ. 3 ನೇ ಆರೋಪಿಯವರು 1 ನೇ ಆರೋಪಿಯವರಿಗೆ ಸಾಯುವಂತೆ ಮತ್ತು ಅವರಿಗೆ ವಿಷ ತೆಗೆದುಕೊಳ್ಳುವಂತೆ ಮಾಡಿ ಅವರೂ ಕೂಡ ಸಾಯುವಂತೆ ಮಾಡು ಎಂದು ಕುಮ್ಮಕ್ಕು ನೀಡಿರುತ್ತಾರೆಂದು, 3 ನೇ ಆರೋಪಿಯವರ ಕುಮ್ಮಕ್ಕಿನಿಂದ 1 ನೇ ಆರೋಪಿಯವರು ಹಲವಾರು ಬಾರಿ ಅವರಿಗೆ ವಿಷ ತೆಗೆದುಕೊಳ್ಳುವಂತೆ ಒತ್ತಾಯ ಪಡಿಸಿರುತ್ತಾರೆಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರ.4 ಪ್ರಾಸಾ-1 ಶಾಲಿನಿ ರವರ ಮುಂದುವರೆದ ಸಾಕ್ಷ್ಯದಲ್ಲಿ 2003-2005 ನೇ ಇಸವಿಯಲ್ಲಿ 1 ನೇ ಆರೋಪಿಯವರ ಕಾಲೇಜಿನಲ್ಲಿ ಅವರ ಸಹಪಾಠಿಯಾಗಿದ್ದು ಅವರು ಅವರಿಗೆ ಪ್ರಸ್ತಾಪ ಮಾಡಿದಾಗ ಅವರು ಅವರನ್ನು ಅವರ ಸಹೋದರ ಎಂದು ಬಾಳಿಸಿರುತ್ತಾರೆಂದು ಹೇಳಿ ಅವರ ಮದುವೆ ಪ್ರಸ್ತಾಪ ಅವರ ಜೊತೆ ಮಾಡುವುದನ್ನು ಅವರು ತಿರಸ್ಕಸಿರುತ್ತಾರೆಂದು, ತದನಂತರವೂ ಕೂಡ 1 ನೇ ಆರೋಪಿ ಅವರ ಜೊತೆ ಅವರಿಗೆ ವುದುವೆಯಾಗುವಂತೆ ಅವರಿಗೆ ಒತ್ತಾಯಿಸುವುದನ್ನು ಮುಂದುವರೆಸಿರುತ್ತಾರೆ. 1 ನೇ ಆರೋಪಿ ಅವರ ಮೊಬೈಲ್ ಫೋನನ್ನು ನನ್ನಿಂದ ಬಲವಂತವಾಗಿ ಕಿತ್ತುಕೊಂಡು ಅವರ ನಂಬರ್ ತೆಗೆದುಕೊಳ್ಳಲು ಪ್ರಯತ್ನಿಸಿರುತ್ತಾರೆ. 1 ನೇ ಆರೋಪಿಯು ಅವರಿಗೆ ಮುಟ್ಟಲು ಪ್ರಯತ್ನಿಸಿದ್ದು ಅವರ ಮತ್ತು ಅವರ ಮೇಲೆ ವೈಂಗಿಕವಾಗಿ ಹಲ್ಲೆ ಮಾಡಿರುತ್ತಾರೆ. ಜನವರಿ 2014 ರಂದು ಅವರು 1 ನೇ ಆರೋಪಿ ಮೊಬೈಲ್ ಕರೆ ಮಾಡಿ ಅವರು ಅವರ ಕರೆಯನ್ನು ಸ್ವೀಕರಿಸದಿದ್ದರೆ 1 ನೇ ಆರೋಪಿ ಅವರ ದೇಹಕ್ಕೆ ತಾನೇ ಹಾನಿಯುಂಟುಮಾಡಿಕೊಳ್ಳುವುದಾಗಿ ತಿಳಿಸಿರುತ್ತಾರೆ. ಆದರೆ ಅದನ್ನು ಅವರು ಅಲಕ್ಷಿಸಿರುತ್ತಾರೆಂದು, ಅವರು ಆ ರೀತಿ ಆಲಕ್ಷಿಸಿರುವ ಕಾರಣಕ್ಕಾಗಿ 1 ನೇ ಆರೋಪಿ ಅವರ ಎಡಗಾಲಿಗೆ ತಾನೇ ಗಾಯವನ್ನುಂಟು ಮಾಡಿಕೊಂಡು ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಗೆ ಭರ್ತಿಯಾಗಿ ಬೆಡ್ ಮೇಲೆ ಮಲಗಿದ ಅವರ ವಿಡಿಯೋವನ್ನು ಅವರಿಗೆ ಅದರ ಛಾಯಾ ಚಿತ್ರವನ್ನು ಕಳುಹಿಸಿರುತ್ತಾರೆ. ನಂತರ ಪುನಃ ಫೆಬ್ರುವರಿ 2014 ನೇ ಇಸವಿಯಲ್ಲಿ 1 ನೇ ಆರೋಪಿಯು ತನ್ನ

ಅದೇ ಎಡಗಾಲಿಗೆ ಗಾಯವನ್ನುಂಟು ಮಾಡಿಕೊಂಡು ಅದರ ಛಾಯಾ ಚಿತ್ರವನ್ನು ಕಳುಹಿಸಿರುತ್ತಾರೆ. ಅವರು 1 ನೇ ಆರೋಪಿಯ ಮದುವೆಯ ಪ್ರಸ್ತಾಪವನ್ನು ತಿರಸ್ಕಸಿದ್ದಕ್ಕಾಗಿ ಸೊಳ್ಳೆಯನ್ನು ಸಾಯಿಸುವ ರಾಸಾಯನಿಕ ದ್ರವವನ್ನು ಸೇವಿಸಿ ತನ್ನ wrist ಅನ್ನು ಕೊಯ್ದು ಕೊಂಡು ಅವರ ಮುಂಗೈನ ಮೇಲೆ ಸಿಗರೇಟಿನ ಕಿಡಿಯಿಂದ ಸುಟ್ಟುಕೊಂಡಿರುತ್ತಾನೆ ಹಾಗೂ ನಿದ್ರೆ ಮಾತ್ರೆಗಳನ್ನು ತೆಗೆದುಕೊಂಡಿರುತ್ತಾನೆ. 1 ನೇ ಆರೋಪಿಯ ದೂರವಾಣಿ ಕರೆಗಳನ್ನು ಅವರು ಸ್ವೀಕರಿಸದೇ ಇದ್ದ ಕಾರಣ ಆರೋಪಿಯು ಅವರ ಮನೆಯ ಮುಂದೆ ರಾತ್ರಿಯಿಂದ ಬೆಳಗ್ಗೆವರೆಗೆ ನಿಂತುಕೊಂಡಿದ್ದನು. ಈ ಮೇಲೆ ಹೇಳಿದ ಘಟನೆ ಗಳು 2003-2014 ಇಸವಿ ಯ ಮಧ್ಯೆ ವಿವಿದ ಕಾಲಘಟ್ಟದಲ್ಲಿ ಸಂಬವಿಸಿರುತ್ತದೆಂದು, 1 ನೇ ಆರೋಪಿ ಅವರ ವಿರುದ್ದ ಅವರು ಪೊಲೀಸರಿಗೆ ದೂರನ್ನು ನೀಡಬಾರದೆಂದು ಅವರಿಗೆ ಹೆದರಿಸುತ್ತಿದ್ದನು. ಆದರೆ 1 ನೇ ಆರೋಪಿಯು ಅವರ ಕುಟುಂಬದ ಉಳಿದ ಸದಸ್ಯರುಗಳು ಅವರ ಜೊತೆ ದುರ್ವತನೆ ಮಾಡಿದ್ದು ಮತ್ತು 1 ನೇ ಆರೋಪಿಯು ಕೇವಲ ಅದರ ಒಂದು ಭಾಗವಾಗಿದ್ದು ಆ ಕಾರಣಕ್ಕಾಗಿ 1 ನೇ ಆರೋಪಿ ಯ ಕುಟುಂಬಂದ ಸದಸ್ಯರುಗಳು ಅವರು ಮಾಡಿರುವ ದುಷ್ಕೃತ್ಯಕ್ಕೆ ಅವರ ವಿರುದ್ದ ಅವರು ಪಿರ್ಯಾದು ನೀಡಬಹುದೆಂದು ಮತ್ತು ಅದನ್ನು ಅವರು ಅನುಭವಿಸಲು ಅವರ ವಿರುದ್ದ ಅವರು ಪಿರ್ಯಾದು ನೀಡಬಹುದೆಂದು ಮತ್ತು ಅದನ್ನು ಅವರು ಅನುಭವಿಸಲು ಯೋಗ್ಯರಿರುತ್ತಾರೆಂದು ಅವರಿಗೆ ಹೇಳಿದ್ದನು. ಒಂದು ವೇಳೆ ಅವರು 1 ನೇ ಆರೋಪಿಯನ್ನು ಮದುವೆಯಾಗದೇ ಬೇರೆ ಹುಡಗನನ್ನು ಮದುವೆಯಾದರೆ, ಯಾವ ಹುಡುಗ ಅವರ ಜೊತೆ ಮದುವೆಯಾಗುತ್ತಾನೋ ಆ ಹುಡುಗನನ್ನು 1 ನೇ ಆರೋಪಿಯು ಕೊಲೆ ಮಾಡುವುದಾಗಿ ತಿಳಿಸಿರುತ್ತಾರೆ. 1 ನೇ ಆರೋಪಿಯು ತಾನು ಬೇರೆ ಮದುವೆ ಆದ್ಯಾಗ್ಯೂ ಕೂಡ ಅವರನ್ನು ಬಿಡುವುದಿಲ್ಲವೆಂದು ಮತ್ತು ಅವರ ಬಳಿ ಬರುವುದಾಗಿ ಹೇಳಿರುತ್ತಾನೆ. ಆರೋಪಿತರು ಅವರ ಜೊತೆ ಮಾಡಿದ ದುಷ್ಕೃತ್ಯದಿಂದ ಅವರು ಅವರ ಸಂಗೀತ ಮತ್ತು ವಿದ್ಯಾಬ್ಯಾಸದ ಮೇಲೆ ಅವರ ಧ್ಯಾನವನ್ನು ಕೇಂದ್ರಿಕರಿಸಲು ಅವರಿಗೆ ಸಾದ್ಯವಾಗಿರುವುದಿಲ್ಲ ಮತ್ತು ಆರೋಪಿತರ ದುರ್ವತೆಯಿಂದ ಅವರ ತಂದೆ ತಾಯಿಯವರ ಆರೋಗ್ಯ ಕುಂಟಿತಗೊಂಡಿರುತ್ತದೆ. ಆರೋಪಿತರಿಂದ ಅವರ ಮತ್ತು ಅವರ ಕುಟುಂಬದ ಸದಸ್ಯರುಗಳ ಮನಃ ಶಾಂತಿ ಕಳೆದುಕೊಂಡಿರುತ್ತಾರೆ ಹಾಗೂ ಅವರ ದೇಹದ ತೂಕವು ಕೂಡ ಗಣನೀಯವಾಗಿ ಕಡಿಮೆಯಾಗಿರುತ್ತದೆ. 1 ನೇ ಆರೋಪಿಯು ಬಲವಂತವಾಗಿ ಅವರ ಮನೆಗೆ ಅವರನ್ನು ನೋಡಲು ಆಸ್ತಿಗೆ ನಷ್ಟ ಉಂಟುಮಾಡಿರುತ್ತಾರೆಂದು ಅವರಿಗೆ ಮತ್ತು ಅವರ ಕುಟುಂಬದ ಸದಸ್ಯರಿಗೆ ಬೇರೆ ಯಾವ ಶತ್ರುಗಳು ಇರುವುದಿಲ್ಲವೆಂದು, ಅವರಿಗಾಗಲೀ ಅವರ ಕುಟುಂಬದ ಸದಸ್ಯರಿಗಾಗಲೀ ಅಥವಾ ಅವರ ಮನೆಗಾಗಲಿ ಯಾವುದೇ ಹಾನಿ ಉಂಟಾದಲ್ಲಿ ಅದಕ್ಕೆ ಆರೋಪಿತರೇ ಕಾರಣರು ಮತ್ತು ಹೊಣೆಗಾರರು ಆಗಿರುತ್ತಾರೆಂದೆ ಆರೋಪಿತರು ಮತ್ತು ಅವರ ಸಂಬಂದಿಕರು ಅವರ ಮತ್ತು ಆರೋಪಿತರ ಮದ್ಯೆ ಇರುವ ಕಲಹವನ್ನು ಸರಿ ಪಡಿಸದೆ ಇದ್ದ ಕಾರಣಕ್ಕಾಗಿ ಅನ್ಯ ಮಾರ್ಗವಿಲ್ಲದೆ ಅವರು ಪೋಲಿಸ್ ಠಾಣೆಗೆ ಹೋಗಿ ಪಿರ್ಯಾದನ್ನು ನೀಡಿ ಈಗ ನ್ಯಾಯಾಲಯದ ಮುಂದೆ ಹಾಜರಿರುತ್ತಾರೆಂದು, ಅವರು ಆರೋಪಿತರ ವಿರುದ್ದ ಈ ಪ್ರಕರಣದಲ್ಲಿ ಪಿರ್ಯಾದನ್ನು ನೀಡಲು ಹೋದಾಗ 1 ನೇ ಆರೋಪಿಯ ಕಡೆಯ ಜನರು ಮತ್ತು ಅವರ ಕಸಿನ್ ಗಳಾದ ಲೋಕೇಶ್, ನಂದೀಶ್ ಮತ್ತು ರಮೇಶ್ ಮತ್ತು 4 ನೇ

ಆರೋಪಿಯ ಗಂಡ ಮಹೇಂದ್ರ ರವರು ಅವರಿಗೆ ಮತ್ತು ಅವರ ತಂದೆ ತಾಯಿಯವರಿಗೆ ಅವಾಚ್ಯ ಶಬ್ದಗಳಿಂದ ಬೈಯ್ದು ಅವರ ನಡೆತೆಯ ಬಗ್ಗೆ ಕೆಟ್ಟದಾಗಿ ಪೋಲಿಸ್ ಠಾಣೆಯಲ್ಲಿ ಮಾತನಾಡಿ ಅವರಿಗೆ ಪಿರ್ಯಾದನ್ನು ಕೊಡಬಾರದೆಂದು ಹೆದರಿಸಿ ಆ ರೀತಿ ಪಿರ್ಯಾದು ಕೊಟ್ಟಿಲ್ಲಿ ಮುಂದೆ ಅವರು ಕೆಟ್ಟ ಪರಿಣಾಮವನ್ನು ಎದುರಿಸಬೇಕಾಗುತ್ತದೆಂದು ಅವರಿಗೆ ಹೆದರಿಸಿರುತ್ತಾರೆ ಹಾಗೂ 5 ನೇ ಆರೋಪಿ ಅವರಿಗೆ ನೇವಾಗಿ ಮ್ಯಸೇಜ್ ಅನ್ನು ಕಳುಹಿಸಿರುತ್ತಾರೆ ದಿನಾಂಕ 27.06.2014 ರಂದು ಬೆಳಿಗ್ಗ 10.00 ರಿಂದ 10.30 ಅಥವಾ 10.45 ಗಂಟೆಗೆ ಪೊಲೀಸರು ಚಾ.ಸಾ.2 ಮತ್ತು 3 ರವರ ಜೊತೆ ಅವರ ಮನೆಗೆ ಬಂದು 1 ನೇ ಆರೋಪಿಯು ನಿಂತುಕೊಂಡ ಸ್ಥಳವನ್ನು ನೋಡಿ ಕೆಲವೊಂದು ವಿಷಯಗಳನ್ನು ಬರೆದುಕೊಂಡಿರುತ್ತಾರೆ. ಅವರು ಈ ದೂರನ್ನು ನೋಡುತ್ತಿದ್ದು ಅದು ನಿ.ಪಿ.1 ಇರುತ್ತದೆಂದು, ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ನೋಡುತ್ತಿದ್ದು ಅದು ನಿ.ಪಿ.2 ಇರುತ್ತದೆಂದು ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರ.5 ಪ್ರಾಸಾ-2 ರಘುರಾಮ ಎಸ್. ರವರು ತಮ್ಮಸಾಕ್ಷ್ಯದಲ್ಲಿ ನಾನು 2009 ರಿಂದ 2015 ರ ವರೆಗೆ ಮೈಕೋಲೇಔಟ್ ಠಾಣೆಯಲ್ಲಿ ಪೋಲಿಸ್ ಪೇದೆಯಾಗಿ ಕರ್ತವ್ಯ ನರೆವೇರಿಸಿರುತ್ತೇನೆ. ದಿನಾಂಕ 26.07.2014 ರಂದು ಚಾಸಾ-9 ರವರು ಆರೋಪಿಯನ್ನು ಪತ್ತೆ ಮಾಡಿಕೊಂಡು ಬರಲು ನನ್ನನ್ನು ನೇಮಿಸಿದರು. ಅದರಂತೆ ನಾನು ಬಾತ್ಮಿದಾರರಿಂದ ಮಾಹಿತಿ ಪಡೆದು ಬಿಟಿಎಂ 13 ನೇ ಮುಖರಸ್ತೆಯಲ್ಲಿ ಆರೋಪಿ ಇರುವುದನನ್ನು ಖಚಿತಪಡಿಸಿಕೊಂಡು ಅವನ ಹೆಸರು ಚೇತನ್ ಬಿನ್ ವೀರಬದ್ರಯ್ಯ 28 ವಯಸ್ಸು ಎಂಬುದಾಗಿ ತಿಳಿಸಿರುತ್ತಾರೆ. ನಂತರ ಚಾಸಾ-9 ರವರ ಮುಂದೆ ಹಾಜರುಪಡಿಸಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿಯನ್ನು ಸಾಕ್ಷಿ ನೋಡಿ ಗುರುತಿಸೆರುತ್ತಾರೆ. ಇದರ ಬಗ್ಗೆ ನಾನು ಹೇಳಿಕೆಯನ್ನು ಕೊಟ್ಟಿರುತ್ತೇನೆ. ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರ.6 ಪ್ರಾಸಾ-3 ನಂಜೇಗೌಡ ಎಸ್. ರವರು ತಮ್ಮ ಸಾಕ್ಷ್ಯದಲ್ಲಿ ನಾನು **26.08.2011** ರಿಂದ **10.02.2016** ವರೆಗೆ ನಾನು ಮೈಕೋಲೇಔಟ್ ಠಾಣೆಯಲ್ಲಿ ಪಿಎಸ್‌ಐಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕ **26-06-2014** ರಂದು ರಾತ್ರಿ **9.00** ಗಂಟೆಗೆ ನಾನು ಠಾಣಾ ಪ್ರಭಾರದಲ್ಲಿದ್ದಾಗ ಚಾಸಾ-**1** ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಮೊ.ಸಂಖ್ಯೆ **434/2014** ರಲ್ಲಿ ಪ್ರವವನ್ನು ದಾಖಲು ಮಾಡಿ ಅದನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾದಿಕಾರಿಗೆ ಸಲ್ಲಿಸಿರುತ್ತೇನೆ. ಪ್ರವವ ನಿಪಿ-**3**, ಸಾಕ್ಷಿಯ ಸಹಿ ನಿಪಿ-**3** ಎ. ದೂರನ್ನು ಈಗಾಗಲೇ ನಿಪಿ-**1**, ಸಾಕ್ಷಿಯ ಸಹಿ ನಿಪಿ-**1** ಬಿ. ಅದೇ ದಿನ ರಾತ್ರಿ **9.15** ಗಂಟೆಗೆ ಚಾಸಾ-**8** ರವರು **1** ನೇ ಆರೋಪಿಯನ್ನು ಪತ್ತೆ ಮಾಡಿ ಬಿಟಿಎಂ **2** ನೇ ಹಂತ **16** ನೇ ಮುಖ್ಯ ರಸ್ತೆಯ ಬಳಿಯಿಂದ ತಂದು ಹಾಜರು ಪಡಿಸಿದರು. ಆರೋಪಿಯನ್ನು ದಸ್ತಗಿರಿ ಮಾಡಿ ಅದಕ್ಕೆ ಸಂಬಂಧಪಟ್ಟಂತೆ ಚಾಸಾ-**8** ರವರನ್ನು ವಿಚಾರಣೆ ಮಾಡಿ ಹೇಳಿಯನ್ನು ಪಡೆದಿರುತ್ತೇನೆ. ದಿಃ **27-06-2014** ರಂದು ಚಾಸಾ-**1** ರವರು ಕೃತ್ಯ ನಡೆದ ಸ್ಥಳವನ್ನು ತೋರಿಸಿದ್ದು ಬೆಳಗ್ಗೆ **10** ರಿಂದ **10.45** ರ ಸಮಯಲ್ಲಿ ಚಾಸಾ-**2** ಮತ್ತು **3** ರವರ ಸಮಕ್ಷಮ ಪಂಚನಾಮೆ ಜರುಗಿಸಿರುತ್ತೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ-**2** ಎಂದು, ಸಾಕ್ಷಿಯ ಸಹಿಯನ್ನು ನಿಪಿ-**2(**ಬಿ**)** ಎಂದು ಗುರುತಿಸಲಾಗಿದೆ. ಅದೇ ದಿನ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿ 29-06-2014 ರಂದು ಚಾಸಾ-1 ರವರ ಮುಂದುವರೆದ ಹೇಳಿಕೆಯನ್ನು ಪಡೆದಿರುತ್ತೇನೆ. ಅದೇ ದಿನ ಚಾಸಾ-4 ರಿಂದ 7 ರವರ ಹೇಳಿಕೆಗಳನ್ನು ಪಡೆದಿರುತ್ತೇನೆ. ದಿಃ 20-09-2014 ರಂದು 2 ರಿಂದ 4 ನೇ ಆರೋಪಿತರು ನ್ಯಾಯಾಲಯಕ್ಕೆ ಹಾಜರಾಗಿ ಶರಣಾಗಿದ್ದು ಅದಕ್ಕೆ ಸಂಬಂಧಪಟ್ಟ ಮೆಮೋ ಅನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 16-03-2015 ರಂದು ಆರೋಪಿತರ ವಿರುದ್ಧ ಆರೋಪ ಸಾಬೀತಾಗಿದ್ದರಿಂದ ಅವರ ವಿರುದ್ಧ ದೋಷಾರೋಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿತರನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರ.7 ನಿಮ್ಮ ಪರವಾಗಿ ಏನಾದರೂ ಪ್ರತಿರಿಕ್ಷ್ಯಾ ಸಾಕ್ಷಿ ಇದೆಯಾ?

ಉತ್ತರಃ

ಪ್ರ೮. ನೀವು ಈ ಕೇಸಿನ ಪರವಾಗಿ ಏನಾದರೂ ಹೇಳುವುದು ಇದೆಯಾ?

ಉತ್ತರಃ

**(ತೆರೆದ ನ್ಯಾಯಾಲಯದಲ್ಲಿ ಆರೋಪಿ ಹೇಳಿಕೆಯನ್ನು ಬರೆದುಕೊಂಡಿದ್ದೇನೆ ಹಾಗೂ ಸದರಿ ಹೇಳಿಕೆಗಳು ಸರಿಯಾಗಿ ಮತ್ತು ಸತ್ಯದ ಹೇಳಿಕೆಗಳಾಗಿವೆಯೆಂದು ಪ್ರಮಾಣೀಕರಿಸಿದ್ದೇನೆ.)**

(ರಶ್ಮೀ ಎಂ.)

ದಿನಾಂಕ 05.02.2024. 6ನೇ ಅ ಮು ಮ ದಂ ನ್ಯಾ ಬೆಂಗಳೂರು.